## ನಿಯಮ ೫೩ಳಿರ ಮೇರೆಗೆ

(ಗೊಂದಲ)

ಅಧ್ಯಕ್ಷರು.— ತಾವು ದಯವಿಟ್ಟು ಕುಳಿತುಕೊಳ್ಳಿ. ಸಭೆ ನಡೆಯಲಿಕ್ಕೆ ಅವಕಾಶ ಮಾಡಿಕೊಡ ಬೇಕು. ಅಜೆಂಡಾ ಪ್ರಕಾರ ಹೋಗಬೇಕು. ನಿಯಮ ೫೩ಳಿರ ಪ್ರಕಾರ ಮಾನ್ಯ ಸದಸ್ಯರಿಗೆ ಅವಕಾಶ ಕೊಟ್ಟಿದ್ದೇನೆ, ಅವರು ಎದ್ದು ನಿಂತಿದ್ದಾರೆ ಅರ್ಥ ಹೇಳಿದ್ದಾರೆ. ಈ ಟೈಮ್‌ನಲ್ಲಿ ನೀವು ಇಂಟರ್ ಫಿಯರ್ ಮಾಡುವುದು ಸರಿಯಲ್ಲ. ಆಮೇಲೆ ಪಂಪಾಪತಿಯವರದ್ದು ನಿಯಮ ೬೮ರ ವಿಷಯ ಇದೆ. ಮಂತ್ರಿಗಳು ಬಂದು ಕೂತಿದ್ದಾರೆ. ದಯವಿಟ್ಟು ಎಲ್ಲರೂ ಕೂಡಿ. ಸಹಕಾರ ಮಾಡಿ.

(ಗೊಂದಲ)

MR SPEAKER.— Whatever Mr. Bhupathy speaks will not go to record. The speech of only the hon. Member Sri K. Kushal should go into the record. Whatever the hon Member Sri Bhupathy said will be expunged. ನೀವು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಕುಶಾಲ್‌ರವರು ಹೇಳಿದ್ದು ಮಾತ್ರ ರೆಕಾರ್ಡ್‌ಗೆ ಹೋಗುತ್ತದೆ.

(ಗೊಂದಲ)

ಅಧ್ಯಕ್ಷರು.— ಕುಶಾಲ್‌ರವರೇ, ಹೇಳಿ.

## ೧ ಸುಳ್ಯ ಕ್ಷೇತ್ರದ ಪೋಲೀಸ್ ಠಾಣೆಗೆ ಜೀಪನ್ನು ಒದಗಿಸುವ ಬಗ್ಗೆ

ಶ್ರೀ ಕೆ. ಕುಶಾಲ (ಸುಳ್ಯ).— ಮಾನ್ಯ ಅಧ್ಯಕ್ಷರೇ, ಸುಳ್ಯ ವಿಧಾನಸಭಾ ಕ್ಷೇತ್ರವು ಗುಡ್ಡಗಾಡು ಪ್ರದೇಶವೆಂದು ಕೇಂದ್ರ ಸರ್ಕಾರ ಪ್ರಕಟಣೆ ಮಾಡಿದಂತೆ ಮಲೆನಾಡು ಹಿಂದುಳಿದ ಪ್ರದೇಶವಾಗಿದ್ದು ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರ ಕೂಡಾ ಆಗಿರುತ್ತದೆ. ಈ ಕ್ಷೇತ್ರದ ಸಾರ್ವಜನಿಕರಿಗೆ ವರ್ಷದ ೧೨ ತಿಂಗಳು ಸರ್ವಋತು ರಸ್ತೆ ಸೇತುವೆಗಳಿಲ್ಲದೆ ಬಹಳ ಕಷ್ಟದಿಂದ ಜೀವನವನ್ನು ಸಾಗಿಸುತ್ತಿದ್ದಾರೆ. ಮಲೆನಾಡು ಪ್ರದೇಶವಾಗಿದ್ದು ಕ್ಷೇತ್ರದ ಉದ್ದಗಲಕ್ಕೂ ರಸ್ತೆಗಳಿಲ್ಲದೆ ಸೇತುವೆಗಳಿಲ್ಲದೆ ನದಿ ಹಳ್ಳಗಳಿಂದ ಸಂಪರ್ಕಗಳಿಲ್ಲದೆ ತೊಂದರೆಯಾಗಿರುತ್ತದೆ. ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಮೂರು ಪೋಲೀಸ್ ಆರಕ್ಷಕ ಠಾಣೆ ಮತ್ತು ಒಂದು ಪೋಲೀಸ್ ಹೊರ ಠಾಣೆಯು ಇರುವುದು. ಈ ಕ್ಷೇತ್ರದಲ್ಲಿ ಕರ್ನಾಟಕ ಅರಣ್ಯ ನಿಗಮದ ರಬ್ಬರ್ ತೋಟವು ಲಕ್ಷಗಟ್ಟಲೆ ಎಕರೆ ಜಮೀನುಗಳಿದ್ದು ರಬ್ಬರು ನಿಗಮದ ಇಲಾಖೆ, ಒಬ್ಬ ಆರಕ್ಷಕ ಉಪನಿರೀಕ್ಷಕರೂ, ಕೆಲವರು ಪೋಲೀಸ್ ಕಾನ್‌ಸ್ಟೇಬಲ್ ಸಿಬ್ಬಂದಿಗಳು ಬರುವುದು. ರಬ್ಬರು ನಿಗಮದ ರಬ್ಬರು ಕಳ್ಳಸಾಗಾಣೆ, ಮಲೆನಾಡು ಅರಣ್ಯ ಪ್ರದೇಶದ ಮರಗಳ್ಳ ಸಾಗಾಣೆ ಕೂಡಾ ಇಲ್ಲಿ ಬಹಳಷ್ಟು ನಡೆಯುತ್ತಿದೆ ಅಲ್ಲದ ಈ ಕ್ಷೇತ್ರದ ಪರಿಮಿತಿಯು ಹೊರರಾಜ್ಯದ ಕೇರಳ ಗಡಿ ಪ್ರದೇಶ ಕೂಡಾ ಬರುತ್ತಿದ್ದು, ಕಳ್ಳಸಾಗಾಣೆದ ರರ ಹಾವಳಿ ಬಹಳ ಜಾಸ್ತಿ ಇರುತ್ತದೆ. ಹೀಗಿದ್ದರೂ ಸುಳ್ಯ ತಾಲ್ಲೂಕು ಕೇಂದ್ರದಲ್ಲಿ ಬರುವ ಪೋಲೀಸ್ ಠಾಣೆಗೆ ಒಂದು ಜೀಪಿನ ವ್ಯವಸ್ಥೆಯು ಇರುವುದಿಲ್ಲ. ಆಧುನೀಕರಣ ನೀತಿಯಂತೆ ಕೆಲವು ಪೋಲೀಸು ಆರಕ್ಷಕ ಠಾಣೆಗಳಿಗೆ ಜೀಪಿನ ವ್ಯವಸ್ಥೆ ಮಾಡಿದ್ದರೂ, ಈ ಸುಳ್ಯ ಠಾಣೆಗೆ ಜೀಪಿನ ವ್ಯವಸ್ಥೆ ಕೂಡಾ ನೀಡಿಲ್ಲ. ಆದುದರಿಂದ ಈ ಗುಡ್ಡಗಾಡು ಪ್ರದೇಶವಾದ ಸುಳ್ಯ ಪೋಲೀಸ್ ಠಾಣೆಗೆ ಒಂದು ಜೀಪನ್ನು (ವಾಹನ ಸೌಕರ್ಯ) ನೀಡುವ ಕ್ರಮವನ್ನು ಕೂಡಲೇ ಕೈಗೊಳ್ಳಬೇಕಾಗಿ ಈ ಮೂಲಕ ಸಂಬಂಧಪಟ್ಟ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ). — ಮಾನ್ಯ ಅಧ್ಯಕ್ಷರೇ,

ಗುಡ್ಡಗಾಡು ಪ್ರದೇಶದ ಮೇಲೆ ವ್ಯಾಪ್ತಿ ಇರುವಂತಹ ಪೋಲೀಸ್ ಠಾಣೆಯಾದ ಸುಳ್ಯ ಠಾಣೆಗೆ ಒಂದು ಜೀಪನ್ನು ಕೊಡುವ ಅವಶ್ಯಕತೆಯನ್ನು ಇಲಾಖೆ ಈಗಾಗಲೇ ಮನಗಂಡಿದೆ, ಹಾಲಿ ಆ ಠಾಣೆಗೆ ಒಂದು ಮೋಟಾರ್ ಸೈಕಲ್‌ನ್ನು ಕೊಟ್ಟಿದ್ದು ಜೀಪನ್ನು ಆರ್ಥಿಕ ಪರಿಸ್ಥಿತಿ ಮತ್ತು ಆದ್ಯತೆಗಳನ್ನು ಪರಿಶೀಲಿಸಿ ಕೊಡಬೇಕಾಗಿರುವುದರಿಂದ ಇಲ್ಲಿನವರೆಗೆ ಜೀಪನ್ನು ಕೊಟ್ಟಿಲ್ಲ.

ಪೋಲೀಸ್ ಇಲಾಖೆಯ ಆಧುನೀಕರಣ ಯೋಜನೆಯ ಅಡಿಯಲ್ಲಿ ಕೇಂದ್ರ ನಿಧಿಯಿಂದ ಖರೀದಿಸಲಾದ ವಾಹನಗಳಲ್ಲಿ ಈವರೆವಿಗೂ ಕೋಮುವಾರು ಗಲಭೆಗಳ ಪ್ರದೇಶದಲ್ಲಿರುವ ೬೧ ಪೋಲೀಸ್ ಠಾಣೆಗಳಿಗೆ ಒಂದೊಂದು ಜೀಪುಗಳನ್ನು ಒದಗಿಸಲಾಗಿದೆ. ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಈ ಕೆಳಕಂಡ ಪೋಲೀಸ್ ಠಾಣೆಗಳಿಗೆ ಕೋಮುವಾರು ಗಲಭೆಗಳ ಪ್ರದೇಶವೆಂದು ಪರಿಗಣಿಸಿ ಜೀಪುಗಳನ್ನು ಒದಗಿಸಲಾಗಿದೆ.

ಅ) ಉಳ್ಳಾಲ ಪೋಲೀಸ್ ಠಾಣೆ

ಬ) ಬಂಟ್ವಾಳ ಪೋಲೀಸ್ ಠಾಣೆ

ಇ) ಮಂಗಳೂರು ಉತ್ತರ ಪೋಲೀಸ್ ಠಾಣೆ

ಈ) ಪುತ್ತೂರು ಪೋಲೀಸ್ ಠಾಣೆ

ಈ ಅಂಕಿ ಅಂಶಗಳನ್ನು ಪರಿಶೀಲಿಸಿದರೆ ಇಡೀ ರಾಜ್ಯದಲ್ಲಿ ಪೋಲೀಸ್ ಠಾಣೆಗಳಿಗೆ ಜೀಪು ಕೊಟ್ಟಿರುವುದು ೬೧ ಠಾಣೆಗಳಿಗೆ ಅವುಗಳ ಪೈಕಿ ದಕ್ಷಿಣ ಕನ್ನಡ ಜಿಲ್ಲೆಗೆ ಈಗಾಗಲೇ ನಾಲ್ಕನ್ನು ಕೊಡಲಾಗಿದೆ.

ಆಧುನೀಕರಣ ಯೋಜನೆ ಅಡಿಯಲ್ಲಿ ಹಂತ ಹಂತವಾಗಿ ಎಲ್ಲಾ ಪೋಲೀಸ್ ಠಾಣೆಗಳಿಗೆ ಜೀಪುಗಳನ್ನು ಒದಗಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಗುಡ್ಡಗಾಡು ಪ್ರದೇಶವಾದ ಸುಳ್ಯ ಪೋಲೀಸ್ ಠಾಣೆಗೆ ಜೀಪನ್ನು ಒದಗಿಸುವ ಬಗ್ಗೆ ಪರಿಶೀಲಿಸಿ ಒಂದು ಜೀಪನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು.—ಶ್ರೀ ಪಿ. ಎಂ. ಚಿಕ್ಕಬೋರಯ್ಯನವರು ಮತ್ತು ಮುಕ್ತಾರುನ್ನೀಸಾ ಬೇಗಂ ಅವರು ಆಬ್ಸೆಂಟ್

ಶ್ರೀ ಬಾಬುರೆಡ್ಡಿ ತುಂಗಳ್.—ಆಬ್ಸೆಂಟ್

ಶ್ರೀ ಆರ್. ವೆಂಕಟರಾಮಯ್ಯ.—ಆಬ್ಸೆಂಟ್

ಶ್ರೀ ಜಿ. ರಾಮದಾಸ್.—ಆಬ್ಸೆಂಟ್

ಶ್ರೀ ಆರ್. ಎನ್. ನಾಯಕ್.—ಆಬ್ಸೆಂಟ್

ಶ್ರೀ ಎಂ. ಕೆ. ಕುಲಕರ್ಣಿ.—ಆಬ್ಸೆಂಟ್

ಶ್ರೀ ಬಿ. ಎಂ. ಇದಿನಬ್ಬ.—ಆಬ್ಸೆಂಟ್

## ೨) ಬಂಟ್ವಾಳ ಪುರಸಭೆಯ ವ್ಯಾಪ್ತಿಯ ಹಳ್ಳಿಗಳಲ್ಲಿ ಕುಡಿಯುವ ನೀರಿನ ಕೊರತೆ

**ಶ್ರೀ ಬಿ. ಎ. ಉಮ್ಮರಬ್ಬ** (ವಿಠಲ್).—ಮಾನ್ಯ ಅಧ್ಯಕ್ಷರೇ, ಬಂಟ್ವಾಳ ಪುರಸಭೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೀವ್ರ ಕೊರತೆ ಇದೆ ಇದಕ್ಕಾಗಿ ಬೃಹತ್ ಯೋಜನೆಯನ್ನು ಕೈಗೊಳ್ಳುವ ಭರವಸೆಯನ್ನು ಮಾನ್ಯ ಸರ್ಕಾರ ಮೂರು ವರ್ಷಗಳ ಹಿಂದಿನಿಂದಲೂ ನೀಡುತ್ತಿದ್ದರೂ ಕೆಂಚಿಕ್ಕೂ ಕಾರ್ಯರೂಪಕ್ಕೆ ಬಂದಿಲ್ಲ. ಈ ಕುಡಿಯುವ ನೀರಿನ ಯೋಜನೆಯ ವಸ್ತುಸ್ಥಿತಿಯ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರಿಂದ ಸವಿವರ ಹೇಳಿಕೆಯನ್ನು ಬಯಸುತ್ತೇನೆ. ತೀವ್ರ ನೀರಿನ ಕೊರತೆ ಇರುವ ಈ ಪುರಸಭೆಯ ಪ್ರದೇಶಗಳಿಗೆ ಪೂರ್ಣ ಪ್ರಮಾಣದ ಯೋಜನೆಯು ಅನುಷ್ಠಾನ ಆಗುವವರೆಗೆ ತಾತ್ಕಾಲಿಕ ತಕ್ಷಣದ ಕ್ರಮದ ಅವಶ್ಯಕತೆ ಇದ್ದು ಆ ಬಗ್ಗೆ ಮಾನ್ಯ ಸಚಿವರ ವಿವರಗಳೊಂದಿಗೆ ರಚನಾತ್ಮಕ ಭರವಸೆಯನ್ನು ಒತ್ತಾಯಿಸುತ್ತೇನೆ.

**ಶ್ರೀ ಪಿ. ಜಿ. ಆರ್. ಸಿಂಧ್ಯ** (ನಗರಾಭಿವೃದ್ಧಿ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ಈ ವಿಷಯವನ್ನು ತಂದು ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತಕ್ಷಣ ತೆಗೆದುಕೊಳ್ಳತಕ್ಕಂಥದ್ದರ ಬಗ್ಗೆ ಭರವಸೆಯನ್ನು ನಾನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.